**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.</u>**

**OS No**.599/2023

**PW**:1

**ದಿನಾಂಕ 18.02.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್.ಆರ್.ಬಿ. ವಕೀಲರಿಂದ:</u>**

ದಾವೆಯ ಬಗ್ಗೆ ನನಗೆ ಗೊತ್ತು. ನನಗೆ ಓದಲು ಬರೆಯಲು ಬರುತ್ತದೆ. ದಾವಾ ಆಸ್ತಿ ನಂ.49 ಇರುತ್ತದೆ. ನಾನು ದಾವಾ ಆಸ್ತಿಯ ಮಾಲೀಕರು ಇರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವ್ಯವಸಾಯ ಮಾಡುತ್ತೇನೆ. ನಾನು ಜೇರಂಕಲಗಿ ಗ್ರಾಮದಲ್ಲಿ ಇದ್ದು ದುಡಿದುಕೊಂಡು ಇರುತ್ತೇನೆ ಎಂದರೆ ಸಾಕ್ಷಿಯು ಮಹಾರಾಷ್ಟ್ರಕ್ಕೆ ದುಡಿಯಲು ಹೋಗುತ್ತೇನೆ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯ ಸ್ವಲ್ಪ ಭಾಗದಲ್ಲಿ ಮನೆಯನ್ನು ಕಟ್ಟಿಕೊಂಡು ಇರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮಾಲೀಕರು ಪ್ರತಿವಾದಿ ಎಂದರೆ ಸರಿಯಲ್ಲ. ನಾನು ಮಹಾರಾಷ್ಟ್ರಕ್ಕೆ ದುಡಿಯಲು ಹೋದಾಗ ಅದರ ಗೈರು ಪಾಯಿದೆ ಪಡೆದುಕೊಂಡು ಪ್ರತಿವಾದಿಯು ತನ್ನ ಹೆಸರನ್ನು ಖೊಟ್ಟಿಯಾಗಿ ದಾವಾ ಆಸ್ತಿಗೆ ದಾಖಲಿಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.</u>**

**<u>ಮರು ವಿಚಾರಣೆ: ಇಲ್ಲ:</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.